RNU AIR DHARWAD

JUNE 23, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ರಾಜ್ಯದ ಮಾವು ಬೆಳೆಗಾರರಿಗೆ, ಎರಡೂವರೆ ಲಕ್ಷ ಮೆಟ್ರಿಕ್ ಟನ್ ಮಾವು ಬೆಲೆ ವ್ಯತ್ಯಾಸಕ್ಕೆ, ಪರಿಹಾರ ನೀಡಲು, ನಿರ್ಧಾರ.
- ಹಾವೇರಿ ಜಿಲ್ಲೆಯಲ್ಲಿ, ಮೂರು ನೂತನ ಶೀತಲೀಕರಣ ಘಟಕಗಳ ನಿರ್ಮಾಣಕ್ಕೆ, ಚಾಲನೆ.
- ಉತ್ತರಕನ್ನಡದ, ಅಪ್ಸರಕೊಂಡ–ಮುಗಳಿ, ಕಡಲ ಜೀವಿಧಾಮ ಘೋಷಣೆ; ಪರಿಸರಾಸಕ್ತರ, ಸ್ವಾಗತ.
- ಧಾರವಾಡ ಐ.ಐ.ಟಿ.ಗೆ, 2 ಸಾವಿರ ಕೋಟಿ ರೂಪಾಯಿ, ಕೇಂದ್ರದಿಂದ ಹೆಚ್ಚುವರಿ ಅನುದಾನ.

<><><>

ಈಗ ವಾರ್ತೆಗಳ ವಿವರ

<><><>

ಕೇಂದ್ರದ ಕೃಷಿ ಹಾಗೂ ರೈತ ಕಲ್ಯಾಣ ಖಾತೆ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರು, ನಿರಂತರ ಬೆಲೆ ಕುಸಿತದಿಂದ ತೊಂದರೆಗೀಡಾಗಿರುವ, ಕರ್ನಾಟಕದ ಮಾವು ಬೆಳೆಗಾರರಿಗೆ, ಗಮನಾರ್ಹ ಪರಿಹಾರ ನೀಡಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಜಂಟಿಯಾಗಿ, 2 ದಶಾಂಶ 5 ಲಕ್ಷ ಮೆಟ್ರಿಕ್ ಟನ್ ಮಾವಿನ ಹಣ್ಣಿನ ಬೆಲೆ ವ್ಯತ್ಯಾಸಕ್ಕೆ, ರೈತರಿಗೆ ಪರಿಹಾರ ನೀಡಲು, ಕೇಂದ್ರ ಕೃಷಿ ಖಾತೆ ಸಚಿವರು ಹಾಗೂ ರಾಜ್ಯದ ಕೃಷಿ ಖಾತೆ ಸಚಿವ ಎನ್. ಚಲುವರಾಯ ಸ್ವಾಮಿ, ವಿಡಿಯೊ ಸಂವಾದ ಸಭೆಯಲ್ಲಿ ನಿರ್ಧರಿಸಿದ್ದಾರೆ. ಕರ್ನಾಟಕದ ಅಂದಾಜು, ಒಟ್ಟು 10 ಲಕ್ಷ ಮೆಟ್ರಿಕ್ ಟನ್ ಮಾವಿನ ಉತ್ಪಾದನೆಯಲ್ಲಿ, ಎರಡೂವರೆ ಲಕ್ಷ ಮೆಟ್ರಿಕ್ ಟನ್‌ಗಳ ವರೆಗೆ, ವಿಶೇಷವಾಗಿ ತೋತಾಪುರಿ ಮಾವಿಗೆ ಪರಿಹಾರ ನೀಡಲು, ಸಭೆ ನಿರ್ಧರಿಸಿತು.

<><><>

ಈ ಮಧ್ಯೆ, ಕರ್ನಾಟಕದ ಮಾವು ಬೆಳೆಗಾರರಿಗೆ, ಸಹಾಯ ಮಾಡುವಂತೆ, ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಕೃಷಿ ಖಾತೆ ಸಚಿವ ಶಿವರಾಜ್‌ಸಿಂಗ್ ಚೌವ್ಹಾಣ್ ಅವರಿಗೆ ಪತ್ರ ಬರೆದಿದ್ದಾರೆ.

<><><>

30 ಕೋಟಿ ರೂಪಾಯಿ ವೆಚ್ಚದಲ್ಲಿ, ರೈತರ ಉತ್ಪನ್ನಗಳ ಸಂರಕ್ಷಣೆ ಹಾಗೂ ಬೇಡಿಕೆಗೆ ಅನುಗುಣವಾಗಿ, ಲಾಭದ ಮಾರಾಟಕ್ಕೆ ಅನುವು ಕಲ್ಪಿಸಲು, ಶೀತಲೀಕರಣ ಘಟಕ ನಿರ್ಮಿಸಲಾಗುವುದು ಎಂದು,  ಕೃಷಿ ಮಾರುಕಟ್ಟೆ ಖಾತೆ ಸಚಿವ ಶಿವಾನಂದ ಪಾಟೀಲ ಹೇಳಿದ್ದಾರೆ. ಹಾವೇರಿ ಜಿಲ್ಲೆ, ರಾಣಿಬೆನ್ನೂರ ಬಳಿ, ಹೂಲಿಹಳ್ಳಿ – ಕೂನಬೇವು ಗ್ರಾಮದ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ, 8 ಸಾವಿರದ 7 ನೂರಾ 94 ಮೆಟ್ರಿಕ್ ಟನ್ ಸಾಮರ್ಥ್ಯದ, ಮೂರು ನೂತನ ಶೀತಲ ಘಟಕಗಳ ನಿರ್ಮಾಣ ಕಾಮಗಾರಿಗೆ, ಜಿಲ್ಲಾ ಉಸ್ತುವಾರಿ ಸಚಿವರು, ಭೂಮಿಪೂಜೆ ನೆರವೇರಿಸಿದರು. ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ ಯೋಜನೆ ಅಡಿ, ಮೂರು ಶೀತಲ ಗೃಹಗಳು, ನಿರ್ಮಾಣಗೊಳ್ಳಲಿವೆ. ಮಾರುಕಟ್ಟೆ ಪ್ರಾಂಗಣದಲ್ಲಿ, ಆಧುನಿಕ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದರು.

<><><>

ಉತ್ತರಕನ್ನಡ ಜಿಲ್ಲೆ, ಹೊನ್ನಾವರ ಸಮುದ್ರ ತೀರದ,6 ಕಿಲೋ ಮೀಟರ್ ಪ್ರದೇಶ ಹಾಗೂ ಅರಣ್ಯ ಭೂಮಿ ಒಳಗೊಂಡು, ಒಟ್ಟು 5 ಸಾವಿರದ 9 ನೂರಾ 59 ಹೆಕ್ಟರ್ ಪ್ರದೇಶವನ್ನು, 'ಅಪ್ಸರಕೊಂಡ ಮುಗಳಿ ಕಡಲ ವನ್ಯ ಜೀವಿಧಾಮ' ಎಂದು ಘೋಷಿಸಲು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಈ ಕುರಿತು ಒಂದು ವರದಿ.

<><><>

*ಉತ್ತರಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಮುಗಳಿ – ಅಪ್ಸರಕೊಂಡದಲ್ಲಿ ರಾಜ್ಯದ, ಮೊಟ್ಟಮೊದಲ, ಕಡಲಜೀವಿಗಳ ಸಂರಕ್ಷಿತ ಧಾಮ, ಮರೈನ್ ಸ್ಯಾಂಕ್ಚುರಿಗೆ ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಇತ್ತೀಚೆಗೆ ಅನುಮೋದನೆ ನೀಡಿದ ಹಿನ್ನೆಲೆ, ರಾಜ್ಯ ಸಚಿವ ಸಂಪುಟ ಅಪ್ಸರಕೊಂಡ ಮುಗಳಿ ವನ್ಯಜೀವಿ ಧಾಮಕ್ಕೆ ಅಧಿಕೃತತೆಯ ಮೊಹರು ಒತ್ತಿದೆ. ಕಡಲ ಜೀವಿಗಳ ಸಂರಕ್ಷಿತ ಪ್ರದೇಶ ಯೋಜನೆಯಿಂದ, ಅಪರೂಪದ ತಿಮಿಂಗಿಲುಗಳು, ಡಾಲ್ಫಿನ್‌ಗಳು, ಸಮುದ್ರದ ಅಳಿವಿನಂಚಿನ ಮೀನುಗಳು ಹಾಗೂ ಆಮೆಗಳನ್ನು ಮುಂದಿನ ಪೀಳಿಗೆಗಾಗಿ ಸಂರಕ್ಷಿಸಲು ಸಾಧ್ಯವಾಗಲಿದೆ.*

<><><>

*ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು ಹೆಚ್ಚಿನ ಮಾಹಿತಿ ನೀಡಿದ್ದಾರೆ, ಕಾರವಾರದ ಕಡಲ ಜೀವಶಾಸ್ತ್ರ ಅಧ್ಯಯನ ವಿಭಾಗದ, ವಿಶ್ರಾಂತ ಹಿರಿಯ ವಿಜ್ಞಾನಿ, ಪ್ರೊಫೆಸರ್ ವಿ.ಎನ್.ನಾಯಕ.*

<><><>

ವಿವೇಕ ಧ್ವನಿ (40) + ಪ್ರೊ. ವಿ.ಎನ್. ನಾಯಕ್ ಧ್ವನಿ (50) ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆ – ಐ.ಐ.ಟಿ.ಗೆ ಕೇಂದ್ರ ಸರ್ಕಾರ 2 ಸಾವಿರ ಕೋಟಿ ರೂಪಾಯಿ ಹೆಚ್ಚುವರಿ ಅನುದಾನ ನೀಡುತ್ತಿದೆ ಎಂದು ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯ

ಬಿ.ವಿ.ಭೂಮರೆಡ್ಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ, ಸರ್ಕಾರಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರ ಸಂಘ, ಆಯೋಜಿಸಿದ್ದ, 'ಭಾರತೀಯ ಶಿಕ್ಷಣ ಪದ್ಧತಿ; ಶಿಕ್ಷಕರ ನಿಜವಾದ ಪಾತ್ರ' ವಿಷಯದ, ರಾಷ್ಟ್ರೀಯ ಸಂವಾದ ಕಾರ್ಯಕ್ರಮದ, ಸಮಾರೋಪ ಸಂವಾದದಲ್ಲಿ ಪಾಲ್ಗೊಂಡು, ಮಾತನಾಡಿದರು.

<><><>

ರಾಷ್ಟ್ರೀಯ ಶಿಕ್ಷಣ ನೀತಿ – 2020, ಐತಿಹಾಸಿಕ ಶಿಕ್ಷಣ ಸುಧಾರಣಾ ಯೋಜನೆಯಾಗಿದೆ. ಭಾರತವನ್ನು ಜಾಗತಿಕ ನೆಲೆಯಲ್ಲಿ, ಜ್ಞಾನದ ಮಹಾಶಕ್ತಿಯಾಗಿ ರೂಪಿಸುವ ಗುರಿ ಹೊಂದಿದೆ ಎಂದು, ಸಚಿವ ಜೋಶಿ ಹೇಳಿದರು.

<><><>

ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆಯ ಡೀನ್ ಡಾಕ್ಟರ್ ಎಸ್.ಎಂ. ಶಿವಪ್ರಸಾದ ಅವರು, 21ನೇ ಶತಮಾನದಲ್ಲಿ ಶಿಕ್ಷಣ ವಿಷಯವಾಗಿ, ವಿಶೇಷ ಉಪನ್ಯಾಸ ನೀಡಿದರು.

<><><>

ಮಂಡ್ಯ ಸೇರಿದಂತೆ, ಅಕ್ಕಪಕ್ಕದ ಜಿಲ್ಲೆಗಳಲ್ಲಿ ಬೃಹತ್ ಕಾರ್ಖಾನೆಗಳನ್ನು ಸ್ಥಾಪಿಸಿ, ಸ್ಥಳೀಯ ಯುವ ಜನತೆಗೆ, ಉದ್ಯೋಗ ಒದಗಿಸಲು, ಯೋಜಿಸಲಾಗಿದೆ; ರಾಜ್ಯ ಸರ್ಕಾರದ ಸಹಕಾರ ಅಗತ್ಯ ಎಂದು, ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಮಂಡ್ಯದಲ್ಲಿ ಮಾತನಾಡಿದ ಅವರು, ಹೂಡಿಕೆದಾರರಿಗೆ ಪ್ರೋತ್ಸಾಹ ನೀಡಿ, ಅನುದಾನ ಒದಗಿಸಿ, ಅನುಕೂಲ ಕಲ್ಪಿಸಲು ತಮ್ಮ ಇಲಾಖೆ ಸಿದ್ಧ ಎಂದರು.

<><><>

ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯದ ಬಗ್ಗೆ, ಮುಂಬರುವ 3 ತಿಂಗಳಲ್ಲಿ, ಸಮಗ್ರ ವರದಿ ತಯಾರಿಸಲು, ಅರಣ್ಯ ಇಲಾಖೆ ಮುಖ್ಯಸ್ಥರಿಗೆ, ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ, ನಿರ್ದೇಶಿಸಿದ್ದಾರೆ. 2013 ರಲ್ಲಿ, ಪಶ್ಚಿಮಘಟ್ಟ ಕಾರ್ಯಪಡೆ, ಪಶ್ಚಿಮಘಟ್ಟದ ತಪ್ಪಲಿನ ಉತ್ತರಕನ್ನಡ ಜಿಲ್ಲೆ ಹಾಗೂ ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯದ ಕುರಿತು, ತಜ್ಞರ ವರದಿಯನ್ನು ಸಲ್ಲಿಸಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಪರಿಸರವಾದಿ ಉತ್ತರಕನ್ನಡ ಜಿಲ್ಲೆ ಶಿರಸಿಯ, ಅನಂತ ಹೆಗಡೆ ಅಶೀಸರ.

<><><>

ಅನಂತ ಹೆಗಡೆ ಅಶೀಸರ ಧ್ವನಿ 40 ಸೆಕೆಂದುಗಳು.

<><><>

ರಾಯಚೂರ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ, 936 ಕೋಟಿ ರೂಪಾಯಿ ವೆಚ್ಚದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಶಂಕುಸ್ಥಾಪನೆ ಹಾಗೂ ಬುಡಕಟ್ಟು ಸಾಂಸ್ಕೃತಿಕ ಉತ್ಸವಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಯರಗೇರಾ ಗ್ರಾಮದಲ್ಲಿ ಇಂದು ಚಾಲನೆ ನೀಡಲಿದ್ದಾರೆ. ಬೆಳಗ್ಗೆ 11 ಗಂಟೆಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ನಾಮಕರಣ, ಉದ್ಯಾನ ಹಾಗೂ ಕಂಚಿನ ಪುತ್ಥಳಿ ಅನಾವರಣ, ಕಲ್ಯಾಣ ಕರ್ನಾಟಕ, ಮಾನವ ಜಿನೋಮ್ ಅಧ್ಯಯನ ಸಂಸ್ಥೆಯ, ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ನೆರವೇರಿಸಲಿದ್ದಾರೆ.

<><><>

ಒಲಿಂಪಿಕ್ ಕ್ರೀಡೆಯ ಮಹತ್ವದ ಕುರಿತು, ಜನ ಜಾಗೃತಿ ಜಾಥಾಕ್ಕೆ, ಬೆಳಗಾವಿಯಲ್ಲಿ ರಾಜ್ಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ. ಗೋವಿಂದರಾಜ್ ಚಾಲನೆ ನೀಡಿದರು. ಬೆಳಗಾವಿಯ ಕಿಲ್ಲೆಯಿಂದ ಆರಂಭವಾದ ಓಟದಲ್ಲಿ, ಶಾಸಕ ರಾಜು ಸೇಠ, ಜಿಲ್ಲಾಧಿಕಾರಿ ಮೊಹಮ್ಮದ್ ರೋ ´ನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೀಮಾಶಂಕರ ಗುಳೇದ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು. ಗೋವಿಂದರಾಜ್ ಅವರು ಮಾತನಾಡಿ, ಒಲಿಂಪಿಕ್ ಜನ ಜಾಗ್ರತಿ ಓಟದಲ್ಲಿ, ಹೆಚ್ಚಿನ ಸಂಖ್ಯೆಯಲ್ಲಿ, ಯುವಜನತೆ ಪಾಲ್ಗೊಂಡಿದ್ದು, ಸಂತಸದ ವಿಷಯ ಎಂದರು.

<><><>

11ನೇ ಅಂತಾರಾಷ್ಟ್ರೀಯ ಯೋಗ ದಿನದಂದು, ಆಂಧ್ರ ಪ್ರದೇಶದ ವಿಶಾಖಪಟ್ಟಣದ ಕಡಲ ತೀರದಲ್ಲಿ ಆಯೋಜಿಸಿದ್ದ, ಯೋಗಾಂಧ್ರ ಕಾರ್ಯಕ್ರಮ, ಗಿನ್ನಿಸ್ ದಾಖಲೆ ನಿರ್ಮಿಸಿದೆ. 3 ಲಕ್ಷದ 105 ಜನ ಪಾಲ್ಗೊಂಡು, ದಾಖಲೆ ನಿರ್ಮಿಸಿದ್ದಕ್ಕಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

<><><>

ರಾಯಚೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ, ಬಿಚ್ಚಾಲಿ ಗ್ರಾಮದಲ್ಲಿ, ಶ್ರೀ ಬೃಂದಾವನ ಮಹಿಳಾ ಸ್ವ ಸಹಾಯ ಸಂಘ, ಗ್ರಾಮೀಣ ಸಾಮಾಜಿಕ ಉತ್ಪಾದನಾ ಘಟಕವನ್ನು, ಶಾಸಕ ಬಸನಗೌಡ ದದ್ದಲ್ ಹಾಗೂ ರಾಯಚೂರು ಯಾದಗಿರಿ ಸಂಸದ ಕುಮಾರ ನಾಯಕ ಉದ್ಘಾಟಿಸಿದರು.

<><><>

ಯಾದಗಿರಿ ಜಿಲ್ಲೆ, ಶಹಾಪುರ ತಾಲೂಕು, ಸನ್ನತಿ ಬ್ರಿಜ್ ಕಂ ಬ್ಯಾರೇಜ್ ಮೂಲಕ, 70 ಕೋಟಿ 8 ಲಕ್ಷ ರೂಪಾಯಿ ವೆಚ್ಚದಲ್ಲಿ, ಶಹಾಪುರ ನಗರಕ್ಕೆ ಶಾಶ್ವತ ಕುಡಿಯುವ ನೀರು ಪೂರೈಕೆ ಯೋಜನೆ ಪೂರ್ಣಗೊಂಡಿದೆ. ಶೀಘ್ರ ಮುಖ್ಯಮಂತ್ರಿ ಉದ್ಘಾಟಿಸುವರು ಎಂದು, ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದ ಮಾವು ಬೆಳೆಗಾರರಿಗೆ, ಎರಡೂವರೆ ಲಕ್ಷ ಮೆಟ್ರಿಕ್ ಟನ್ ಮಾವು ಬೆಲೆ ವ್ಯತ್ಯಾಸಕ್ಕೆ, ಪರಿಹಾರ ನೀಡಲು, ನಿರ್ಧಾರ.
- ಹಾವೇರಿ ಜಿಲ್ಲೆಯಲ್ಲಿ, ಮೂರು ನೂತನ ಶೀತಲೀಕರಣ ಘಟಕಗಳ ನಿರ್ಮಾಣಕ್ಕೆ, ಚಾಲನೆ. ಉತ್ತರಕನ್ನಡದ, ಅಪ್ಸರಕೊಂಡ–ಮುಗಳಿ, ಕಡಲ ಜೀವಿಧಾಮ ಘೋಷಣೆ; ಪರಿಸರಾಸಕ್ತರ, ಸ್ವಾಗತ.
- ಧಾರವಾಡ ಐ.ಐ.ಟಿ.ಗೆ, 2 ಸಾವಿರ ಕೋಟಿ ರೂಪಾಯಿ, ಕೇಂದ್ರದಿಂದ ಹೆಚ್ಚುವರಿ ಅನುದಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>